ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	701 (871)
2	ಸದಸ್ಯರ ಹೆಸರು	:	ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ
3	ಉತ್ತರಿಸಬೇಕಾದ ದಿನಾಂಕ	:	09-03-2021
4	ಉತ್ತರಿಸುವ ಸಚಿವರು	:	ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಉಡುಪಿ ನಗರಕ್ಕೆ ವಾರಾಹಿಯಿಂದ ಕುಡಿಯುವ ನೀರನ್ನು ಪೂರೈಸುವ ಯೋಜನೆಯ ಒಟ್ಟು ಅಂದಾಜು ವೆಚ್ಚವೆಷ್ಟು; ಬಿಡುಗಡೆಯಾದ ಅನುದಾನವೆಷ್ಟು; ಬಿಡುಗಡೆಗೆ ಬಾಕಿಯಿರುವ ಅನುದಾನವೆಷ್ಟು; ಈ ಯೋಜನೆಯು ಯಾವ ಯಾವ ಕಾಮಗಾರಿಗಳನ್ನು ಒಳಗೊಂಡಿರುತ್ತದೆ; ಇವುಗಳ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆಯೇ; (ಟೆಂಡರ್‌ನ್ನು ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸವನ್ನು ನೀಡುವುದು)	ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು, ಕೇಂದ್ರ ಪುರಸ್ಕೃತ ಅಮೃತ್ ಸಹಯೋಗದೊಂದಿಗೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್) ವಾರಾಹಿ ನದಿ ಮೂಲದಿಂದ ನೀರು ಸರಬರಾಜು ಒದಗಿಸುವ ಮುಖಾಂತರ ಉಡುಪಿ ನಗರದಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಉನ್ನತೀಕರಿಸುವ ಉದ್ದೇಶದಿಂದ ಮೂರು (3) ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿಗಳ ಅಂದಾಜು ವೆಚ್ಚ, ಬಿಡುಗಡೆಯಾದ ಅನುದಾನ, ಗುತ್ತಿಗೆದಾರರ ವಿಳಾಸ, ಕಾಮಗಾರಿಯ ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.
ಆ)	ಈ ಯೋಜನೆಯಲ್ಲಿ ಟೆಂಡರ್ ನಿಯಮಾವಳಿಗೆ ಅನುಗುಣವಾಗಿ ಕಾಮಗಾರಿ ನಿರ್ವಹಿಸದೇ ಇರುವುದು ಹಾಗೂ ಕಳಪೆ ಗುಣಮಟ್ಟದ ಕಾಮಗಾರಿಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾಮಗಾರಿಯ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಇಲಾಖೆಯಿಂದ ಕೈಗೊಂಡ ಕ್ರಮಗಳು ಯಾವುವು; ಕಾಮಗಾರಿ ಗುಣಮಟ್ಟ ನಿಯಂತ್ರಣಕ್ಕಾಗಿ ನಿಯೋಜಿಸಿದ ಅಧಿಕಾರಿಯ ಹೆಸರು ಮತ್ತು ಪದನಾಮ ಒದಗಿಸುವುದು.	ಕ್ವಿಮಿಪ್ ಕಾರ್ಯಕ್ರಮದಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಪೌರಾಯುಕ್ತರು, ನಗರಸಭೆ ಉಡುಪಿ ರವರ ಅಧೀನದಲ್ಲಿ ಯೋಜನಾ ಅನುಷ್ಠಾನ ಘಟಕವನ್ನು ಸೃಜಿಸಲಾಗಿದ್ದು, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕಅಭಿಯಂತರರು ಮತ್ತು ಯೋಜನಾ ಸಮಾಲೋಚಕರನ್ನು ನಿಯೋಜಿಸಲಾಗಿದ್ದು ಯೋಜನೆಗಳನ್ನು ಟೆಂಡರ್ ನಿಯಮದಂತೆ ಅನುಷ್ಠಾನಗೊಳಿಸಲು ತಾಂತ್ರಿಕ ನೆರವನ್ನು ಒದಗಿಸುತ್ತಿರುತ್ತಾರೆ. ಮಂಗಳೂರು ವಲಯದಲ್ಲಿ ಕ್ವಿಮಿಪ್ ಕಾರ್ಯಕ್ರಮದಡಿ 4 ನಗರ/ಪಟ್ಟಣಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳಿಗೆ ಸಂಬಂದಿಸಿದಂತೆ ಗುಣ ಮಟ್ಟ ಮತ್ತು ತಾಂತ್ರಿಕ ವಿಷಯಕ್ಕೆ ಸಂಬಂದಿಸಿದಂತೆ ಸಲಹೆ ಸೂಚನೆ ನೀಡಲು ಮುಖ್ಯ ಅಭಿಯಂತರರ ಹುದ್ದೆಗೆ ಸಮನಾದ ವೈಯಕ್ತಿಕ ಸಮಾಲೋಚಕರನ್ನು ನೇಮಿಸಲಾಗಿದೆ. ಅಲ್ಲದೇ, ಎಡಿಬಿ ಮತ್ತು ಅಮೃತ್‌ನ ಬಾಹ್ಯ ನೆರವಿನೊಂದಿಗೆ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳಲ್ಲಿ ಎಡಿಬಿ ತಂಡದವರು ಮತ್ತು ಕೇಂದ್ರ ಪುರಸ್ಕೃತ ಅಮೃತ್ ಯೋಜನೆ (Independent Reviw Monitoring Agency) ತಂಡದವರು ಕಾಲಕಾಲಕ್ಕೆ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿರುತ್ತಾರೆ ಹಾಗೂ ಇದುವರೆಗೂ ಸದರಿ ತಂಡಗಳು ಕಾಮಗಾರಿಯ ಗುಣಮಟ್ಟದ ಕುರಿತು ಯಾವುದೇ ದೂರು/ಆಕ್ಷೇಪಣೆ ವ್ಯಕ್ತಪಡಿಸಿರುವುದಿಲ್ಲ. ಸ್ಥಳೀಯವಾಗಿ ಕಾಮಗಾರಿ ಗುಣಮಟ್ಟ ಮತ್ತು ಸುಲಭ ಅನುಷ್ಠಾನಕ್ಕಾಗಿ ಶ್ರೀ ಉಮಾಶಂಕರ್‌ರಾವ್, ಕಾರ್ಯಪಾಲಕ ಅಭಿಯಂತರರು, ಯೋಜನಾ ಅನುಷ್ಠಾನಘಟಕ, ಉಡುಪಿ ನಗರಸಭೆ ರವರನ್ನು ನಿಯೋಜಿಸಲಾಗಿದೆ. ಅಲ್ಲದೇ ಗುಣಮಟ್ಟದ ನಿಯಂತ್ರಣಕ್ಕಾಗಿ ಮೆ॥ EGIS & ಮೆ॥Tractebel GKW ಯೋಜನಾ ಸಮಾಲೋಚಕರನ್ನು ನಿಯೋಜಿಸಲಾಗಿರುತ್ತದೆ.

ಇ)	ಸಬ್ ಲೀಸ್ ನೀಡಬಾರದು ಎಂಬ ನಿಬಂಧನೆ ಇದ್ದರೂ ಸಬ್ ಲೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳಾವುವು; ಈ ಯೋಜನೆಯನ್ನು ಪೂರ್ಣಗೊಳಸಲು ಗುತ್ತಿಗೆದಾರರಿಗೆ ನೀಡಿದ ಕಾಲಮಿತಿ ಯಾವುದು; ನಿಗದಿತ ಕಾಲದೊಳಗೆ ಪೂರ್ಣಗೊಳಸಲು ಇಲಾಖೆಯ ಕ್ರಮಗಳು ಯಾವುವು?	ಕಾಮಗಾರಿಗಳನ್ನು ಸಬ್ ಲೀಸ್ ನೀಡಿರುವುದಿಲ್ಲ. ಗುಣಮಟ್ಟ, ಕಾಮಗಾರಿಯ ಯಶಸ್ವಿ ಅನುಷ್ಠಾನಕ್ಕೆ ಗುತ್ತಿಗೆ ಪಡೆದ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ ಮತ್ತು ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂದಿಸಿದ ವ್ಯವಹಾರವು ಗುತ್ತಿಗೆದಾರರೊಂದಿಗೆ ನಡೆಯತ್ತಿದೆ. ಯೋಜನೆಯನ್ನು ಪೂರ್ಣಗೊಳಸಲು ನೀಡಲಾದ ಕಾಲಮಿತಿಯ ವಿವರ **ಅನುಬಂದದಲ್ಲಿ** ಒದಗಿಸಿದೆ. ನಿಗದಿತ ಕಾಲದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಸಲು ಗುತ್ತಿಗೆದಾರರು, ಯೋಜನಾ ಅನುಷ್ಠಾನ ಘಟಕದೊಂದಿಗೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿಯಲ್ಲಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ, ಕೆ.ಯು.ಐ.ಡಿ.ಎಫ್.ಸಿಯಲ್ಲಿ ಕಾಲಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆಗಳು ಆಯೋಜಿಸಲಾಗುತ್ತಿದ್ದು, ಕಾರ್ಯಕಾರಿ ವ್ಯವಸ್ಥಾಪಕರು, ಕ್ವಿಮಿಪ್ ರವರಿಂದ ಪ್ರತಿ ಮಾಹೆ ಯೋಜನಾ ನಗರಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ಮಾಡಲಾಗುತ್ತಿದ್ದು, ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಸಲು ಕ್ರಮವಹಿಸಲಾಗಿದೆ.

ಕಡತ ಸಂಖ್ಯೆ: ನಅಇ 65 ಪಿಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ

ಉಡುಪಿ ನಗರದಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮದಲ್ಲಿ ಅನುಷ್ಠಾಗೊಳಿಸುತ್ತಿರುವ ಕಾಮಗಾರಿಗಳ ವಿವರ

ಕ್ರ ಸಂ	ಕಾಮಗಾರಿಯ ವಿವರ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಗುತ್ತಿಗೆ ಮೊತ್ತ (ರೂ. ಕೋಟಿಗಳಲ್ಲಿ)	ಗುತ್ತಿಗೆ ನೀಡಿದ ದಿನಾಂಕ	ಪೂರ್ಣಗೊಳಿಸುವ ದಿನಾಂಕ	ಇದುವರೆಗಿನ ವೆಚ್ಚ (ರೂ. ಕೋಟಿಗಳಲ್ಲಿ)	ಬಾಕಿ ಬಿಡುಗಡೆಯಾಗಬೇಕಾದ ಅನುದಾನ (ರೂ. ಕೋಟಿಗಳಲ್ಲಿ)	ಕಾಮಗಾರಿಯ ಪ್ರಮುಖ ಘಟಕಗಳು
1	ಉಡುಪಿ ನಗರಕ್ಕೆ ನೀರು ಮೂಲದ ಅಭಿವೃದ್ಧಿ ಕಾಮಗಾರಿ (ವರಾಹಿ ನದಿ ಮೂಲದಿಂದ)	ಮೇ ಡಿ.ಆರ್.ಎಸ್. ಇನ್ಫ್ರಾಟೆಕ್. ಪ್ರೈ.ಲಿ ಹೈದರಾಬಾದ್ ಪ್ಲಾಟ್ ನಂ. ಎಸ್-1, ಪ್ರಿಯಾ ಅಪಾರ್ಟ್‌ಮೆಂಟ್, ರಾಜಭವನ ರಸ್ತೆ, ಸೋಮಾಜಿಗುಡ್ಡಾ, ಹೈದರಾಬಾದ್-500082	119.51	23.08.2019	22.05.2022	59.60	59.91	ಜಾಕ್‌ವೆಲ್-1 ಇಂಟೇಕ್‌ವೆಲ್-1 ಪೈಪ್ ಅಳವಡಿಕೆ-38 ಕಿ.ಮೀ ಹಾಗೂ ಇತರೆ
2	ಉಡುಪಿ ನಗರಕ್ಕೆ ಸಗಟು ನೀರಿನ ಅಭಿವೃದ್ಧಿ ಕಾಮಗಾರಿ	ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಮೌಲ್ಯಮಾಪನ ಹಂತದಲ್ಲಿರುತ್ತದೆ.						45 ಎಂಎಲ್‌ಡಿ ನೀರು ಶುದ್ಧೀಕರಣ ಘಟಕ, 27 ಎಂಎಲ್‌ಡಿ ಕುಡಿಯುವ ನೀರಿನ ತ್ಯಾಜ್ಯ ನಿರ್ವಹಣೆ ಘಟಕ ಹಾಗೂ ಇತರೆ
3	ಉಡುಪಿ ನಗರಕ್ಕೆ ಕುಡಿಯುವ ನೀರು ಸರಬರಾಜುಗಾಗಿ ವಿತರಣಾ ಜಾಲಗಳ ಅಭಿವೃದ್ಧಿ ಮತ್ತು ವಿಸ್ತರಣೆ ಕಾಮಗಾರಿ	ಮೇ ಸೂಯಜ್ ಪ್ರಾಜೆಕ್ಟ್ ಪ್ರೈ.ಲಿ-ಸೂಯಜ್ ಇಂಡಿಯ ಪ್ರೈ.ಲಿ-ಡಿ.ಆರ್.ಎಸ್. ಇನ್ಫ್ರಾಟೆಕ್, ಪ್ರೈ.ಲಿ, (ಜೆ.ವಿ) ಯುನಿಟೆಕ್ ಬ್ಯುಸಿನೆಸ್ ಪಾರ್ಕ್, ಟವರ್-ಎ, 2ನೇ ಮಹಡಿ, ಸೌತ್ ಸಿಟಿ-1, ಗುರಗಾಂವ್-122001, ಹರಿಯಾಣ ಭಾರತ.	103.22	16.11.2018	10.10.2022	38.93	64.29	388.91 ಕಿ.ಮೀ ಪೈಪ್ ಅಳವಡಿಕೆ, 36452 ನಳಸಂಪರ್ಕಗಳು, 7 ಮೇಲ್ಮಟ್ಟದ ಜಲ ಸಂಗ್ರಹಗಾರಗಳು ಹಾಗೂ ಇತರೆ